ಕ್ಷಮಿಸು...’ ಎನ್ನುತ್ತಿದ್ದಂತೆಯೇ ಬಾಯಿಗೆ ಕೈ ಅಡ್ಡತಂದು, ‘ಪ್ರತಿಯೊಬ್ಬ ಹೆಣ್ಣೂ ಅಂಥ ಬಲಿಷ್ಠ ತೋಳುಗಳಲ್ಲಿ ನಲುಗಲು ಬಯಸುತ್ತಾಳಲ್ಲವೇ?’ ಎಂದಂದು ನಾಚಿಕೆಯಿಂದ ಕಣ್ಣು ಮುಚ್ಚಿದಳು. ನಾನು ದೀಪವನ್ನು ಆರಿಸಿ ಆಕೆಯನ್ನು ಇನ್ನಷ್ಟು ಭಯಗೊಳಿಸಲಾರದೇ, ಆಕೆಯ ಮುಂಗುರುಳನ್ನು ನೇವರಿಸುತ್ತಾ ಹಾಗೆಯೇ ಮಲಗಿಸಿಕೊಂಡೆ. ಆಕೆ ನಿದ್ದೆ ಹೋದ ಮೇಲೂ ನಾನು ನನ್ನ ಭಂಗಿಯನ್ನು ಬದಲಿಸಲಿಲ್ಲ – ಆಕೆ ಎಚ್ಚರಗೊಂಡು ಮತ್ತೆ ಆತಂಕಗೊಂಡಾಳೆಂದು.

ಬೆಳಗ್ಗೆ ನನಗಿಂತಲೂ ಮೊದಲೇ ಎದ್ದಿದ್ದಳು. ‘ಪಂಡಿತರನ್ನು ಕರೆಸಿ, ವಿಚಾರಿಸಿ. ನನ್ನ ದುಗುಡವನ್ನು ನಿವಾರಿಸಿ’ ಎಂದು ಬೇಡಿಕೊಂಡಳು. ‘ಇದಕ್ಕೇಕೆ ನೀನು ಇಷ್ಟೊಂದು ಗಾಬರಿಯಾಗಿದ್ದೀಯಾ ಪ್ರಿಯೇ. ಬಾಯಿಲ್ಲಿ...’ ಎಂದು ನನ್ನ ತೊಡೆಯ ಮೇಲೆ ಕೂರಿಸಿಕೊಳ್ಳಲು ಹೋದೆ. ಆಕೆ ಕೊಸರಿಕೊಂಡು ಪಕ್ಕದ ಹಾಸಿಗೆಯ ಮೇಲೆ ಕುಳಿತಳು. ನಾನು ಸೀರೆ ಮತ್ತು ರವಿಕೆಯ ನಡುವಿನಿಂದ ಕಾಣುತ್ತಿದ್ದ ಹೊಟ್ಟೆಯನ್ನು ಮೃದುವಾಗಿ ಸವರಿ, ‘ಸಿಹಿ ಸುದ್ದಿಯಿರಬೇಕು...’ ಎಂದು ತಮಾಷೆ ಮಾಡಿದೆ. ‘ನಿಮಗೆ ಯಾವಾಗಲೂ ತಮಾಷೆಯೇ. ನಾನು ಎಷ್ಟು ಗಾಬರಿಗೊಂಡಿದ್ದೇನೆ, ಗೊತ್ತೇ...’ ಎಂದಳು. ನಾನು ಮತ್ತೆ ತಲೆ ಸವರಿ, ‘ಯಾಕಿಷ್ಟು ಗಾಬರಿಯಾಗಿದ್ದೀಯ? ನೀನು ಗರ್ಭಿಣಿಯಾಗಿದ್ದೀಯಾ ಎಂದು ಇದರ ಅರ್ಥವಿರಬೇಕು...’ ಎಂದೆ. ‘ಆದರೆ, ಕನಸಿನಲ್ಲಿ ಬಿಳಿಯಾನೆಯೇ ಯಾಕೆ ಬರಬೇಕಿತ್ತು? ಭೂಮಿ ಮೇಲೆ ಕಪ್ಪು ಆನೆಗಳು ತಾನೇ ಇರುವುದು?’ ಎಂದಳು.

‘ಬಹುಶಃ ನಿನಗೆ ಬಿಳಿಯಾದ ಸುಂದರವಾದ ಮಗ ಹುಟ್ಟಬಹುದೇನೋ?’ ಎಂದು ತಮಾಷೆ ಮಾಡಿದೆ.

ಪಂಡಿತರನ್ನು ಬರಹೇಳಿದೆ. ಆಕೆಯ ಕನಸಿನ ವಿವರ ವಿವರವನ್ನೂ ಕೇಳಿದ ಅವರು, ‘ಮಹಾರಾಣಿ, ನಿಮಗೆ ಪುತ್ರ ಸಂತಾನವಾಗಲಿದೆ. ಅಸೀಮ ರೂಪಿಯೊಬ್ಬ ಜನಿಸುವುದರ ಮುನ್ಸೂಚನೆಯಿದು...’ ಎಂದು ವ್ಯಾಖ್ಯಾನಿಸಿದರು. ‘ನೀವು ಅದೃಷ್ಟವಂತೆ. ಒಂದು ಸಣ್ಣ ಪ್ರಾಂತ್ಯದ ರಾಣಿಯಾದ ನೀವು, ಒಂದು ಮಹಾ ಸಾಮ್ರಾಜ್ಯದ ಚಕ್ರವರ್ತಿಯ ರಾಜಮಾತೆಯಾಗಲಿದ್ದೀರಿ’ ಎಂದು ಅರ್ಥೈಸಿದರು. ‘ಆನೆ ಎಂಬುದೇ ಸಾಮ್ರಾಜ್ಯದ ಆಳ್ವಿಕೆಯ ಪ್ರತೀಕ. ಸಾಮ್ರಾಟರು ಪಟ್ಟದಾನೆಯನ್ನು ಏರಿಯೇ ತಾನೆ ಮೆರವಣಿಗೆ ಹೊರಡುವುದು. ಕರಿ ಆನೆ ಎಲ್ಲ ಕಡೆ ಲಭ್ಯವಿವೆ, ಆದರೆ ಬಿಳಿಯಾನೆ? ಅದು ಇಂದ್ರನ ಐರಾವತದಂತೆ. ಅತ್ಯಂತ ಅಪರೂಪದ ಹಾಗೂ ತುಂಬಾ ಬೆಲೆಬಾಳುವ ಪ್ರಾಣಿ. ಕಪ್ಪು ಆನೆ ಕಷ್ಟದ, ಶ್ರಮದ, ದುಡಿತದ ಸಂಕೇತವಾದರೆ ಬಿಳಿ ಆನೆ, ಶಾಂತಿಯ ಸಂಕೇತ. ಹುಟ್ಟಲಿರುವ ಪುರುಷ ಮುಂದೆ ಯಾವುದೇ ಆಪತ್ತು, ಅಡೆತಡೆಯಿಲ್ಲದೆ ಸುಖ, ಶಾಂತಿ, ನೆಮ್ಮದಿ, ಸಂತೃಪ್ತಿ, ಸಮೃದ್ಧಿಗಳನ್ನು ನಾಡಿನ ತುಂಬೆಲ್ಲ ಪಸರಿಸುವ ತೇಜೋಪುಂಜನಾಗಿ ಬೆಳಗುತ್ತಾನೆ ಎಂದು ಇದರ ಅರ್ಥವಿರಬಹುದೆಂದು ಅವರು ಅಂದಾಜಿಸಿದರು. ಅದು ಬಿಳಿಯ ಆನೆಯಾದ್ದರಿಂದ ಹುಟ್ಟುವ ಮಗ, ದೇಹಾಕೃತಿಯಲ್ಲಿ ಬಲಾಢ್ಯನಾದರೂ ಮಾನಸಿಕವಾಗಿ ಸೌಮ್ಯ ಸ್ವಭಾವದವನಾಗಿರಬಹುದೇ ಎಂಬುದೊಂದು ಸಣ್ಣ ಅಳುಕು ಮನದೊಳಗಿದ್ದರೂ, ಅದನ್ನು ಯಾರಿಗೂ ಹೇಳಲಿಲ್ಲ.

‘ಆದರೆ ಅಷ್ಟು ದೊಡ್ಡ ಆನೆ ನನ್ನ ಗರ್ಭ ಸೇರಿದ್ದು ನನಗೆ ಏನೋ ಆಪತ್ತು ಬರಬಹುದೇ ಎಂಬ ಆತಂಕ ತರುತ್ತದೆ ಪಂಡಿತರೇ’ ಎಂದಳು. ‘ಧೈರ್ಯವಾಗಿರಿ ಮಹಾರಾಣಿ, ಪ್ರತಿಯೊಂದನ್ನು ವಿಶ್ಲೇಷಿಸಲು ಕನಸಿಗೆ ಅಷ್ಟೊಂದು ಆಯಾಮಗಳಿರುವುದಿಲ್ಲ. ಚಿಂತಿಸಬೇಡಿ. ಏನೂ ಆಗುವುದಿಲ್ಲ. ಆಗುವುದೆಲ್ಲ ಒಳಿತೇ ಆಗುತ್ತದೆ...’ ಎಂದು ಅಭಯ ಹೇಳಿ ಹೊರಟರು. ಆದರೂ ಪುಷ್ಪವನದಲ್ಲಿ ತಿರುಗಾಡುವಾಗಲೆಲ್ಲಾ, ಆಕೆಯ ಮಡಿಲಲ್ಲಿ ತಲೆಯಿಟ್ಟು ಮಲಗಿ ಹೊಟ್ಟೆಗೆ ಕಿವಿಯಾನಿಸಿ ಮಗುವಿನ ಚಲನವಲನವನ್ನೆಲ್ಲಾ ಅವಲೋಕಿಸುತ್ತಿರುವಾಗ ಆಕೆ ಅದೇ ಹೆದರಿಕೆಯನ್ನೇ ವ್ಯಕ್ತಪಡಿಸುತ್ತಲೇ ಇದ್ದಳು: ‘ಆನೆಯಂತಹ ಆನೆಯೇ ನನ್ನ ಹೊಟ್ಟೆಯೊಳಗೆ ಪ್ರವೇಶಿಸಿದೆಯೆಂದರೆ, ಗಜಗರ್ಭವೇ ಸಂಭವಿಸಬಹುದು. ಆ ಗಜಗರ್ಭ ನನ್ನ ಹೊಟ್ಟೆಯಲ್ಲಿ ಬೆಳೆದರೆ ಅದನ್ನು ಹೆರುವುದು ಹೇಗೆ ಎಂಬುದೇ ನನ್ನ ಆತಂಕ...’ ಎಂದು. ಅಂದರೆ ಆನೆಯಂತಹ ಬಲಾಢ್ಯ ಮಗ ಹುಟ್ಟಲಿದ್ದಾನೆ ಎಂಬುದು ಆಕೆಗೆ ಮನವರಿಕೆಯಾದಂತಾಗಿತ್ತು.

‘ಮಾಯಾ, ಅದಕ್ಕೇಕೆ ಭಯ. ಕುಂತಿ ಭೀಮನನ್ನು ಹೆರಲಿಲ್ಲವೇ? ಭೀಮನಿಗಿಂತಲೂ ಬಲಾಢ್ಯ ಮಗು ಈವರೆಗೂ ಈ ಭೂಮಿ ಮೇಲೆ ಹುಟ್ಟಿಲ್ಲ. ಚಿಂತಿಸಬೇಡ...’ ಎಂದು ಧೈರ್ಯ ಹೇಳುತ್ತಿದ್ದೆ. ಆದರೂ ನನ್ನೊಳಗೇ ಒಂದು ಅನುಮಾನ ಶುರುವಾದದ್ದು ಆಕೆಗೆ ಆರು–ಏಳು ತಿಂಗಳು ತುಂಬುವ ವೇಳೆಗೆ. ಆಕೆಯ ಹೊಟ್ಟೆ ಸಹಜವಾದ ಹೆಣ್ಣು ಮಕ್ಕಳಿಗಿಂತ ದೊಡ್ಡದಾಗಿತ್ತು. ಸ್ವಲ್ಪವೇ ಊಟ ಮಾಡಿದರೆ ಸಾಕು ಬಿರಿದುಹೋಗುವಷ್ಟು ದಪ್ಪಗಾಗುತ್ತಿತ್ತು. ಅಂದರೆ ತನ್ನ ಕಲ್ಪನೆಯಂತೆಯೇ ಆನೆಯನ್ನೇ ಮಣಿಸುವಂಥ ಬಲಾಢ್ಯ ಮಗನೇ ಹುಟ್ಟಲಿದ್ದಾನೆ ಎಂಬುದು ಖಾತ್ರಿಯಾಗಿತ್ತು.

ರಾತ್ರಿ ಮಲಗಿದಾಗ ನನ್ನ ಎದೆಯ ಮೇಲೆ ತಲೆಯಿರಿಸಿ, ‘ನಿಮ್ಮನ್ನು ಬಿಟ್ಟು ಹೋಗುತ್ತೇನೇನೋ ಎಂಬ ಭಯ ನನ್ನನ್ನು ಆವರಿಸುತ್ತಿದೆ. ಒಂದು ವೇಳೆ ಪ್ರಸವದಲ್ಲಿ ಏನಾದರೂ ಹೆಚ್ಚುಕಡಿಮೆಯಾಗಿ ನಾನು ತೀರಿಹೋದರೆ, ನನ್ನ ಮಗನಿಗೆ ತಾಯಿಯ ಕೊರತೆಯು ಅರಿವಿಗೆ ಬರದಂತೆ ಕಾಪಾಡಿಕೊಳ್ಳಿ. ಇದು ನನ್ನ ಕೊನೆಯ ಆಸೆ...’ ಎಂದು ಅಂಗಲಾಚಿದಳು. ನಾನು ‘ಏ ಹುಚ್ಚಿ... ಎಂಥ ಮಾತಾಡುತ್ತೀ ತಗೀ... ನೀನು ನನ್ನ ಮನದನ್ನೆ, ಮಹಾರಾಣಿ, ನಿನ್ನನ್ನು ನಾನು ಸಾಯಲು ಬಿಡುವೆನೇ? ಎಂದಿಗೂ ಇಲ್ಲ. ನನ್ನ ಉಸಿರೇ ನೀನು, ನನ್ನ ಉಸಿರನ್ನು ಕೊಟ್ಟಾದರೂ ನಿನ್ನನ್ನು ಕಾಪಾಡಿಕೊಳ್ಳುತ್ತೇನೆ, ಚಿಂತಿಸಬೇಡ...’ ಎಂದು ಭಾವಾವೇಶದಲ್ಲಿ ನುಡಿದೆ. ಅಲ್ಲದೆ ಆಕೆಯ ತುಂಬಿದ ಹೊಟ್ಟೆಯ ಮೇಲೆ ಕೈಯಾಡಿಸಿ, ತಲೆಯಿಟ್ಟು, ಮಗುವಿನ ಒಳ ಓಡಾಟವನ್ನು ಗ್ರಹಿಸಲಾರಂಭಿಸಿದೆ. ಅವಳನ್ನು ಆತಂಕದಿಂದ ಹೊರತರಲು, ‘ನೋಡು, ನಿನ್ನ ಮಗ ನನ್ನನ್ನು ರಾಜನೆಂಬುದನ್ನೂ ಮರೆತು ನನ್ನ ಕಿರೀಟಕ್ಕೇ ಹೇಗೆ ಒದೆಯುತ್ತಾನೆ... ಕಿರೀಟವೆಂದರೆ ಬರೀ ರಾಜನಲ್ಲ, ರಾಜ್ಯದ ಜನರೆಲ್ಲರ ಪ್ರತೀಕ ಎಂದು ಅವನಿಗೆ ತಿಳಿಯದೇ...’ ಎಂದು ಚೇಷ್ಟೆ ಮಾಡಿದೆ. ನನ್ನ ಹಾಸ್ಯಕ್ಕೆ ಆಕೆ ಮನದುಂಬಿ ನಕ್ಕಳು. ಎಲ್ಲವನ್ನೂ ಮರೆತವಳಂತೆ ಕಂಡುಬಂದಳು.

‘ನಾವು ಯಾವಾಗಲೂ ವರ್ತಮಾನದಲ್ಲಿ ಬದುಕಬೇಕು. ಆದರೆ ಹಿಂದಿನ ಇತಿಹಾಸವನ್ನು ತಿಳಿದಿರಬೇಕಷ್ಟೇ. ಏಕೆಂದರೆ ಇತಿಹಾಸದಲ್ಲಿ ಬದುಕಲಾಗುವುದಿಲ್ಲವಲ್ಲ. ಅಂತೆಯೇ ಭವಿಷ್ಯದಲ್ಲಿ ಮಹತ್ವಾಕಾಂಕ್ಷೆಗಳಿರಬೇಕು. ಆದರೆ ಬರೀ ಕನಸಲ್ಲಿ, ಭ್ರಮೆಯಲ್ಲಿ ಬದುಕಲಾಗುವುದಿಲ್ಲವಲ್ಲ. ಆದ್ದರಿಂದ ಹಿಂದಿನ ಇತಿಹಾಸ ಹಾಗೂ ಮುಂದಿನ ಭವಿಷ್ಯಗಳೆರಡರ ಜೀಕಿನ ಮಧ್ಯೆ ನಾವು ಉಯ್ಯಾಲೆ ಆಡುತ್ತ ಪ್ರಸ್ತುತದ ಬದುಕನ್ನು ಖುಷಿಯಿಂದ ಬದುಕಬೇಕು. ಅದೇ ಜೀವನ...’ ಎಂದು ಸಮಾಧಾನಿಸಿ, ನನ್ನ ತೊಡೆಯ ಮೇಲೆ ಆಕೆಯ ತಲೆಯಿರಿಸಿಕೊಂಡು ಮುಂಗುರುಳುಗಳೊಂದಿಗೆ ಆಟವಾಡುತ್ತಾ, ಮುದಗೊಳಿಸುತ್ತಾ, ರಮಿಸುತ್ತಾ ಆಕೆಯ ಭಯವನ್ನು ಹೋಗಲಾಡಿಸಲು ಸಾಧ್ಯವಾದದ್ದನ್ನೆಲ್ಲ ಮಾಡಲಾರಂಭಿಸಿದ್ದೆ. ಹಾಗೆಯೇ ಆಕೆಗೆ ಮಂಪರು ಆವರಿಸಿತು.

ಏಳನೇ ತಿಂಗಳು ಹತ್ತಿರ ಬರುತ್ತಿದ್ದಂತೆಯೇ ಮಾಯಾದೇವಿಯ ತವರು ಮನೆಯವರು ಹೆರಿಗೆಗೆಂದು ಕರೆದೊಯ್ಯಲು ಬಂದು ನಿಂತಿದ್ದರು. ದೇವದಹದಿಂದ ತನ್ನ ಪರಿವಾರದೊಂದಿಗೆ ಬಂದಿಳಿದ ಕೋಲಿಯ ವಂಶದ ದೊರೆ ಅಂಜನಾಪ್ರಭು, ಪತ್ನಿ ಸುಲಕ್ಷಣೆಯರ ಮುಖದಲ್ಲಿ ಸಂಭ್ರಮ ಮನೆ ಮಾಡಿತ್ತು. ನಾನು, ‘ಮಾಯಾ ಭಯಗೊಂಡಿದ್ದಾಳೆ. ಇಂಥ ವೇಳೆ ಪ್ರಯಾಣ ಸೂಕ್ತವಲ್ಲ. ಇಲ್ಲಿಯೇ ಪ್ರಸವವಾಗಲಿ. ನೀವೂ ಮೂರು–ನಾಲ್ಕು ತಿಂಗಳು ಇಲ್ಲೇ ಇದ್ದುಬಿಡಿ. ಆಕೆಗೂ ಧೈರ್ಯ, ನನಗೂ ಸಮಾಧಾನ’ ಎಂದೆ.

‘ಶಾಸ್ತ್ರೋಕ್ತವಾಗಿ ತವರು ಮನೆಯಲ್ಲಿಯೇ ಹೆರಿಗೆ ಆಗಬೇಕಲ್ಲವೇ? ನೀವೇನೂ ಕಾಳಜಿ ಮಾಡಬೇಡಿ. ನಾವೆಲ್ಲಾ ಸುಸೂತ್ರ ನೋಡಿಕೊಳ್ಳುತ್ತೇವೆ...’ ಎಂದರು ಅತ್ತೆ ಸುಲಕ್ಷಣೆ. ಸರಿ, ನಾನು ಎಷ್ಟೇ ಹೇಳಿದರೂ ಅವರು ತಮ್ಮ ಸಂಭ್ರಮವನ್ನು ಕಳೆದುಕೊಳ್ಳಲು ತಯಾರಿಲ್ಲವೆಂದು ತಿಳಿದು, ನಾನೂ ಸುಮ್ಮನಾದೆ.

ಎಂಟನೇ ತಿಂಗಳಿಗೆ ಸೀಮಂತ ಮಾಡುವ ಎಲ್ಲ ಆಚರಣೆಗಳಿಗೆ ತಯಾರಿ ಮಾಡಲಾರಂಭಿಸಿದರು. ಅಕ್ಕಪಕ್ಕದ ಊರುಗಳಿಗೆಲ್ಲ ಭಟರನ್ನು ಕಳುಹಿಸಿ ಆಹ್ವಾನಿಸಲು ಅವರು ಮುಂದಾದರೆ, ನಾನಾದರೂ ಹೇಗೆ ಸುಮ್ಮನಾಗಲಿ. ನಮ್ಮ ಪ್ರಾಂತ್ಯದ ಎಂಬತ್ತು ಸಾವಿರ ಕುಟುಂಬಗಳಿಂದ ಕನಿಷ್ಠ ಲಕ್ಷ ಜನರಾದರೂ ಬರಬಹುದೆಂದು, ಅವರಿಗೆಲ್ಲ ಊಟ ತಿಂಡಿ ತಯಾರಿಸಲು ನೂರಾರು ಅಡುಗೆಭಟ್ಟರನ್ನು ನಿಯೋಜಿಸಿದೆ. ಕೊಬ್ಬಿದ ಸಾವಿರಕ್ಕೂ ಹೆಚ್ಚು ಹೋರಿಗಳು, ಕುರಿ, ಆಡು, ಕೋಳಿಗಳಿಗಂತೂ ಲೆಕ್ಕವೇ ಇಲ್ಲ. ಯಾರಿಗೂ